# ದೇವದಾಸಿ ಕುಟುಂಬಗಳ ಯುವಜನರ ಇಂದಿನ ಬದುಕು

ಮಂಜುಳಾ ತೆಳಗಡೆ

ಸಂಶೋಧಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯಪುರ, ಹಂಪಿ.

DOI: https://doi.org/10.5281/zenodo.22899828

**ABSTRACT:**

ಭಾರತೀಯ ಸಮಾಜದಲ್ಲಿ ಕೆಲವು ಸಾಂಪ್ರದಾಯಿಕ ಪದ್ಧತಿಗಳು ಕಾಲಕ್ರಮೇಣ ಸಾಮಾಜಿಕ ಅಸಮಾನತೆ ಮತ್ತು ಶೋಷಣೆಯ ರೂಪಗಳನ್ನು ಪಡೆದುಕೊಂಡಿವೆ. ದೇವದಾಸಿ ಪದ್ಧತಿಯೂ ಅಂತಹ ಒಂದು ಸಾಮಾಜಿಕ ವ್ಯವಸ್ಥೆಯಾಗಿದ್ದು, ಅದರ ಪರಿಣಾಮಗಳು ಮಹಿಳೆಯರ ಬದುಕಿನಲ್ಲಷ್ಟೇ ಅಲ್ಲದೆ ಅವರ ಮಕ್ಕಳ ಮತ್ತು ಮುಂದಿನ ಪೀಳಿಗೆಯ ಯುವಜನರ ಜೀವನದಲ್ಲಿಯೂ ಕಾಣಿಸಿಕೊಳ್ಳುತ್ತವೆ. ಕರ್ನಾಟಕದಲ್ಲಿ ದೇವದಾಸಿ ಆಚರಣೆಯನ್ನು ನಿಷೇಧಿಸುವ ಕಾನೂನು ಕ್ರಮಗಳು ಕೈಗೊಳ್ಳಲಾಗಿದ್ದರೂ, ಈ ಪದ್ಧತಿಯ ಸಾಮಾಜಿಕ ಪರಿಣಾಮಗಳು ಸಂಪೂರ್ಣವಾಗಿ ನಿರ್ಮೂಲವಾಗಿಲ್ಲ ಎಂಬುದು ಅಧ್ಯಯನದ ಹಿನ್ನೆಲೆಯಿಂದ ಸ್ಪಷ್ಟವಾಗುತ್ತದೆ. ದೇವದಾಸಿ ಕುಟುಂಬಗಳಲ್ಲಿ ಜನಿಸಿದ ಮಕ್ಕಳಿಗೆ ತಮ್ಮ ತಾಯಿಯ ಸಾಮಾಜಿಕ ಗುರುತಿನ ಕಾರಣದಿಂದ ಬಾಲ್ಯದಿಂದಲೇ ವಿಭಿನ್ನ ರೀತಿಯ ಸಾಮಾಜಿಕ ಅನುಭವಗಳು ಎದುರಾಗಬಹುದು. ವಿಶೇಷವಾಗಿ ತಂದೆಯ ಹೆಸರು, ಕುಟುಂಬದ ಗುರುತು, ಜಾತಿ ಮತ್ತು ಸಾಮಾಜಿಕ ಸ್ಥಾನಮಾನಕ್ಕೆ ಸಂಬಂಧಿಸಿದ ಪ್ರಶ್ನೆಗಳು ಅವರ ಶಿಕ್ಷಣ ಮತ್ತು ಸಾಮಾಜಿಕ ಸಂಬಂಧಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಶಾಲಾ ಪರಿಸರದಲ್ಲಿಯೇ ತಂದೆಯ ಹೆಸರನ್ನು ಪ್ರಶ್ನಿಸುವಂತಹ ಅನುಭವಗಳು ಕೆಲವು ಯುವಜನರಲ್ಲಿ ಮುಜುಗರ, ಆತಂಕ ಮತ್ತು ಸಾಮಾಜಿಕ ಹಿಂಜರಿಕೆಯನ್ನು ಉಂಟುಮಾಡುತ್ತವೆ ಎಂದು ಅಧ್ಯಯನದ ಕ್ಷೇತ್ರಾನುಭವಗಳು ಸೂಚಿಸುತ್ತವೆ.

ಇಂತಹ ಅನುಭವಗಳು ಶಿಕ್ಷಣ ಮುಂದುವರಿಸುವ ಮನೋಭಾವದ ಮೇಲೂ ಪರಿಣಾಮ ಬೀರಬಹುದು. ಶಿಕ್ಷಣವು ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಆರ್ಥಿಕ ಸ್ವಾವಲಂಬನೆಯ ಪ್ರಮುಖ ಸಾಧನವಾಗಿದ್ದರೂ, ಆರ್ಥಿಕ ಬಡತನ, ಕುಟುಂಬದ ಜವಾಬ್ದಾರಿಗಳು, ಸಾಮಾಜಿಕ ಕಳಂಕ ಮತ್ತು ಮಾರ್ಗದರ್ಶನದ ಕೊರತೆಗಳಿಂದ ಕೆಲವು ಯುವಜನರು ಶಿಕ್ಷಣವನ್ನು ಮಧ್ಯದಲ್ಲೇ ನಿಲ್ಲಿಸಬೇಕಾದ ಪರಿಸ್ಥಿತಿ ಎದುರಿಸುತ್ತಾರೆ. ದೇವದಾಸಿ ಸಮುದಾಯದ ಯುವಜನರ ಸಮಸ್ಯೆಯನ್ನು ಕೇವಲ ವೈಯಕ್ತಿಕ ಅಥವಾ ಕುಟುಂಬದ ಸಮಸ್ಯೆಯಾಗಿ ನೋಡಲು ಸಾಧ್ಯವಿಲ್ಲ. ಅದು ಸಾಮಾಜಿಕ ರಚನೆ, ಜಾತಿ, ಲಿಂಗ, ಬಡತನ, ಶಿಕ್ಷಣದ ಅವಕಾಶಗಳು ಮತ್ತು

ಸಾಮಾಜಿಕ ಕಳಂಕಗಳ ಪರಸ್ಪರ ಸಂಬಂಧದಿಂದ ರೂಪುಗೊಳ್ಳುವ ಬಹುಆಯಾಮದ ಸಮಸ್ಯೆಯಾಗಿದೆ. ಸಾಮಾಜಿಕ ಕಳಂಕವು ಈ ಸಮಸ್ಯೆಯನ್ನು ಮತ್ತಷ್ಟು ಗಂಭೀರಗೊಳಿಸುತ್ತದೆ. ದೇವದಾಸಿ ಕುಟುಂಬದ ಹಿನ್ನೆಲೆಯನ್ನು ಸುಲಭವಾಗಿ ಗುರುತಿಸಬಹುದಾದ ಸಂದರ್ಭಗಳಲ್ಲಿ ಯುವಜನರು ತಮ್ಮ ಗುರುತನ್ನು ಬಹಿರಂಗಪಡಿಸಲು ಹಿಂಜರಿಯಬಹುದು. ಇದರಿಂದ ಸಾಮಾಜಿಕ ಸಂಬಂಧಗಳು, ಶಿಕ್ಷಣ, ಉದ್ಯೋಗ ಮತ್ತು ವಿವಾಹದಂತಹ ಜೀವನದ ಪ್ರಮುಖ ಕ್ಷೇತ್ರಗಳಲ್ಲಿ ಅಡೆತಡೆಗಳು ಉಂಟಾಗಬಹುದು.

**KEYWORDS:**

ದೇವದಾಸಿ ಸಮುದಾಯ, ಯುವಜನರು, ಸಾಮಾಜಿಕ ಒಳಗೊಳ್ಳುವಿಕೆ, ಸಾಮಾಜಿಕ ಕಳಂಕ, ಶಿಕ್ಷಣ, ಉದ್ಯೋಗ, ಆರ್ಥಿಕ ಸವಾಲುಗಳು.

ಪಿ. ಜಮಾದಾಸ್ ಅವರ Devadasi: Ancient to Modern (2007) ಎಂಬ ಕೃತಿಯಲ್ಲಿ ದೇವದಾಸಿ ಪದ್ಧತಿಯ ಐತಿಹಾಸಿಕ ಹಾಗೂ ಸಾಮಾಜಿಕ ಹಿನ್ನೆಲೆಯನ್ನು ವಿಶ್ಲೇಷಿಸಲಾಗಿದೆ. ಹಿಂದೂ ಧರ್ಮದ ಜಾತಿ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಶೋಷಣೆಗೆ ಒಳಪಡಿಸುವ ಮನುವಾದದ ಪ್ರಭಾವವನ್ನು ಲೇಖಕರು ಉಲ್ಲೇಖಿಸಿದ್ದಾರೆ. ಮಹಿಳೆಯರ ಶಿಕ್ಷಣದ ಕೊರತೆ ಹಾಗೂ ಸಾಮಾಜಿಕ ನಿಯಂತ್ರಣಗಳು ಅವರ ಹಿಂದುಳಿದ ಸ್ಥಿತಿಗೆ ಪ್ರಮುಖ ಕಾರಣಗಳಾಗಿವೆ ಎಂದು ವಿವರಿಸಲಾಗಿದೆ. ದೇವದಾಸಿ ಪದ್ಧತಿಯು ಬೌದ್ಧ ಕಾಲದಿಂದಲೂ ಅಸ್ತಿತ್ವದಲ್ಲಿದ್ದು, ನಂತರ ಜಾತಿ ವ್ಯವಸ್ಥೆ ಮತ್ತು ಧಾರ್ಮಿಕ ಆಚರಣೆಗಳ ಮೂಲಕ ಮತ್ತಷ್ಟು ಬಲಪಡಿಸಲಾಯಿತು ಎಂದು ಲೇಖಕರು ಅಭಿಪ್ರಾಯಪಡುತ್ತಾರೆ. ಅಲ್ಲದೆ, ವಿವಿಧ ಜಾತಿಗಳಲ್ಲಿ ಈ ಪದ್ಧತಿಯ ವ್ಯಾಪಕತೆಯನ್ನು ಅಂಕಿ-ಅಂಶಗಳ ಆಧಾರದ ಮೇಲೆ ವಿಶ್ಲೇಷಿಸಿ, ದೇವದಾಸಿ ಪದ್ಧತಿಯ ಐತಿಹಾಸಿಕ ಬೆಳವಣಿಗೆ ಹಾಗೂ ಸಾಮಾಜಿಕ ಪರಿಣಾಮಗಳನ್ನು ಸಮಗ್ರವಾಗಿ ವಿವರಿಸಿದ್ದಾರೆ.

ಸಾಸ್ಕಿಯಾ ಸಿ. ಕೆರ್ಸೆಬೂಮ್ ಅವರ Nityasumangali: Devadasi Tradition in South India (1987) ಎಂಬ ಕೃತಿಯಲ್ಲಿ ದಕ್ಷಿಣ ಭಾರತದ ದೇವದಾಸಿ ಪದ್ಧತಿಯ ಆಚರಣೆಗಳು, ಧಾರ್ಮಿಕ ನಂಬಿಕೆಗಳು ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ವಿಶ್ಲೇಷಿಸಲಾಗಿದೆ. ದೇವದಾಸಿಯರನ್ನು "ನಿತ್ಯ ಸುಮಂಗಲಿ" ಎಂದು ಕರೆಯುವ ಹಿಂದಿನ ಧಾರ್ಮಿಕ ಮತ್ತು ಸಾಂಸ್ಕೃತಿಕ ಅರ್ಥವನ್ನು ಲೇಖಕರು ವಿವರಿಸಿದ್ದಾರೆ. ದೇವತೆಗಳ ಪೂಜಾ ವಿಧಾನಗಳು, ವಿವಿಧ ಆಚರಣೆಗಳು ಹಾಗೂ ದಕ್ಷಿಣ ಭಾರತದ ಕೆಲವು ಪ್ರದೇಶಗಳಲ್ಲಿ ಕಂಡುಬರುವ ಸಂಪ್ರದಾಯಗಳನ್ನು ವಿವರಿಸಲಾಗಿದೆ. ವಿಶೇಷವಾಗಿ ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ದೇವತೆಗಳ

ಪ್ರತಿಮೆಗಳ ಆರಾಧನೆ ಹಾಗೂ ವಿವಿಧ ಪೂಜಾ ವಿಧಾನಗಳ ಬಗ್ಗೆ ಉಲ್ಲೇಖಿಸಲಾಗಿದೆ. "ಮಾತಂಗಿ" ದೇವತೆಯ ಆರಾಧನೆ ಮತ್ತು ಅದಕ್ಕೆ ಸಂಬಂಧಿಸಿದ ಆಚರಣೆಗಳಲ್ಲಿಯೂ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ ಎಂದು ಲೇಖಕರು ವಿವರಿಸಿದ್ದಾರೆ.

ಸುನೀತಾ ಕರ್ಮಕಾರ ಅವರ Red Light Area: Social Aspects of Sex Workers (2001) ಎಂಬ ಕೃತಿಯಲ್ಲಿ ದೇವದಾಸಿ ಪದ್ಧತಿಯ ಸಾಮಾಜಿಕ ಹಾಗೂ ಧಾರ್ಮಿಕ ಹಿನ್ನೆಲೆಯನ್ನು ವಿಶ್ಲೇಷಿಸಲಾಗಿದೆ. ದೇವರ ಹೆಸರಿನಲ್ಲಿ ಯುವತಿಯರನ್ನು ದೇವದಾಸಿಯರಾಗಿ ಸಮರ್ಪಿಸುವ ಪದ್ಧತಿಯ ಪರಿಣಾಮವಾಗಿ ಅವರು ಶಿಕ್ಷಣ, ಗೌರವ ಮತ್ತು ಸಾಮಾಜಿಕ ಅವಕಾಶಗಳಿಂದ ವಂಚಿತರಾಗುವ ಸ್ಥಿತಿಯನ್ನು ಲೇಖಕರು ವಿವರಿಸಿದ್ದಾರೆ. ಜೊತೆಗೆ, ಲೈಂಗಿಕ ವೃತ್ತಿಗೆ ಸಂಬಂಧಿಸಿದ ವಿವಿಧ ಸಾಮಾಜಿಕ ಸಮಸ್ಯೆಗಳು ಹಾಗೂ ಅದಕ್ಕೆ ಸಂಬಂಧಿಸಿದ ಕಾನೂನುಗಳ ಬಗ್ಗೆ ಸಹ ಕೃತಿಯಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ವಿಲಿಯಂ ಡಾಲ್ರಿಂಪಲ್ ಅವರ Nine Lives: In Search of the Sacred in Modern India (2009) ಎಂಬ ಕೃತಿಯಲ್ಲಿ ರಾಣಿ ಮತ್ತು ಕಾವೇರಿ ಎಂಬ ಇಬ್ಬರು ದೇವದಾಸಿಯರ ಜೀವನಾನುಭವಗಳನ್ನು ಲೇಖಕರು ದಾಖಲಿಸಿದ್ದಾರೆ. ದೇವದಾಸಿ ಮಹಿಳೆಯರ ಜೀವನದಲ್ಲಿರುವ ಅನಿಶ್ಚಿತತೆ, ಸಾಮಾಜಿಕ ಅಸುರಕ್ಷತೆ ಹಾಗೂ ಶೋಷಣೆಯ ವಿವಿಧ ಆಯಾಮಗಳನ್ನು ಈ ಕೃತಿ ಚಿತ್ರಿಸುತ್ತದೆ. ಕಾವೇರಿಯ ಜೀವನದ ಮೂಲಕ ದೇವದಾಸಿ ಮಹಿಳೆಯರು ಎದುರಿಸುವ ಕುಟುಂಬ, ಸಾಮಾಜಿಕ ಮತ್ತು ವೈಯಕ್ತಿಕ ಸಮಸ್ಯೆಗಳನ್ನು ವಿವರಿಸಲಾಗಿದೆ.

ಡಾ. ಎನ್. ಜಗದೀಶ ಕೊಪ್ಪ ಅವರ 'ಬೆಂಗಳೂರು ನಾಗರತ್ನಮ್ಮ' ಕುರಿತ ಕೃತಿಯಲ್ಲಿ ದೇವದಾಸಿ ಪದ್ಧತಿಯ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಆಯಾಮಗಳನ್ನು ವಿಶ್ಲೇಷಿಸಲಾಗಿದೆ. ದೇವದಾಸಿ ಪದ್ಧತಿಯು ಆರಂಭದಲ್ಲಿ ಕಲೆ ಮತ್ತು ಧಾರ್ಮಿಕ ಸೇವೆಯೊಂದಿಗೆ ಸಂಬಂಧ ಹೊಂದಿದ್ದರೂ, ಕಾಲಕ್ರಮೇಣ ಅದು ಶೋಷಣಾತ್ಮಕ ವ್ಯವಸ್ಥೆಯಾಗಿ ರೂಪುಗೊಂಡಿತು ಎಂಬುದನ್ನು ಲೇಖಕರು ವಿವರಿಸುತ್ತಾರೆ. ಬೆಂಗಳೂರು ನಾಗರತ್ನಮ್ಮ ಅವರು ಸಂಗೀತ ಮತ್ತು ನೃತ್ಯ ಕ್ಷೇತ್ರದಲ್ಲಿ ಮಹತ್ವದ ಸಾಧನೆಗಳನ್ನು ಮಾಡಿದರೂ, ಸಮಾಜವು ಅವರಿಗೆ ಯೋಗ್ಯವಾದ ಮಾನ್ಯತೆ ನೀಡಲಿಲ್ಲ ಎಂಬುದನ್ನು ಕೃತಿ ಉಲ್ಲೇಖಿಸುತ್ತದೆ.

ದೇವನಾಥನ್ ಮತ್ತು ವರ್ಜೀನಿಯಸ್ ಖಾಖಾ ಅವರ Social Exclusion and Adverse Inclusion (2014) ಎಂಬ ಕೃತಿಯಲ್ಲಿ ಸಾಮಾಜಿಕ ಹೊರಗಿಡುವಿಕೆ ಮತ್ತು ಪ್ರತಿಕೂಲ ಒಳಗೊಳ್ಳುವಿಕೆ ಎಂಬ ಪರಿಕಲ್ಪನೆಗಳನ್ನು ವಿಶ್ಲೇಷಿಸಲಾಗಿದೆ. ಅಭಿವೃದ್ಧಿ ಎಂದರೆ ಸದಾ ಸಕಾರಾತ್ಮಕ ಬದಲಾವಣೆ ಎಂಬುದಲ್ಲ; ಕೆಲವು ಸಂದರ್ಭಗಳಲ್ಲಿ ಅದು ಸಾಮಾಜಿಕ ಹೊರಗಿಡುವಿಕೆಯನ್ನು ಮತ್ತಷ್ಟು

ಬಲಪಡಿಸಬಹುದು ಎಂದು ಲೇಖಕರು ಅಭಿಪ್ರಾಯಪಡುತ್ತಾರೆ. ಸಾಮಾಜಿಕ ಹೊರಗಿಡುವಿಕೆ ಎನ್ನುವುದು ವ್ಯಕ್ತಿಗಳು ಅಥವಾ ಸಮುದಾಯಗಳನ್ನು ಸಮಾಜದ ಮುಖ್ಯವಾಹಿನಿಯಿಂದ ಸಂಪೂರ್ಣವಾಗಿ ಅಥವಾ ಭಾಗಶಃ ದೂರವಿಡುವ ಪ್ರಕ್ರಿಯೆಯಾಗಿದೆ ಎಂದು ವಿವರಿಸಲಾಗಿದೆ.

ಜೋಗನ್ ಶಂಕರ್ ಅವರ Devadasi Cult: A Sociological Analysis (1990) ಎಂಬ ಕೃತಿಯಲ್ಲಿ ದೇವದಾಸಿ ಪದ್ಧತಿಯ ಇತಿಹಾಸ, ಅದರ ಸಾಮಾಜಿಕ ಹಿನ್ನೆಲೆ ಹಾಗೂ ಸಮಕಾಲೀನ ಸ್ಥಿತಿಗತಿಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿನ ದೇವದಾಸಿ ಮಹಿಳೆಯರು ಎದುರಿಸುತ್ತಿರುವ ವಿವಿಧ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳನ್ನು ಈ ಅಧ್ಯಯನದಲ್ಲಿ ವಿವರಿಸಲಾಗಿದೆ. ಈ ಕೃತಿಯ ಪ್ರಕಾರ, ಬಡ ಮತ್ತು ಅಂಚಿನ ಸಮುದಾಯಗಳ ಹೆಣ್ಣುಮಕ್ಕಳನ್ನು ಬಾಲ್ಯದಲ್ಲಿಯೇ ದೇವರ ಹೆಸರಿನಲ್ಲಿ ದೇವದಾಸಿಯರಾಗಿ ಸಮರ್ಪಿಸುವ ಪದ್ಧತಿ ಇನ್ನೂ ಕೆಲವು ಪ್ರದೇಶಗಳಲ್ಲಿ ಮುಂದುವರಿದಿದೆ. ನಂತರ ಅವರನ್ನು ಮಹಾರಾಷ್ಟ್ರ ಸೇರಿದಂತೆ ವಿವಿಧ ಪ್ರದೇಶಗಳಿಗೆ ಕಳುಹಿಸಿ ವೇಶ್ಯಾವೃತ್ತಿಗೆ ತಳ್ಳುವ ಅಮಾನವೀಯ ಪರಿಸ್ಥಿತಿಯನ್ನು ಲೇಖಕರು ವಿಶ್ಲೇಷಿಸಿದ್ದಾರೆ.

ಶಿವಾನಂದ ಕುಗ್ವೆ ಅವರ ಲೇಖನ ಸಂಕಲನದಲ್ಲಿ "ಬೆತ್ತಲೆ ಸೇವೆ ವಿರೋಧದ ಹೋರಾಟ" ಕುರಿತು ವಿವರಿಸಲಾಗಿದೆ. 1985ರಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳು ಮತ್ತು ಚಿತ್ರಗಳು ದಲಿತ ಹೋರಾಟಗಾರರ ಗಮನ ಸೆಳೆದ ಹಿನ್ನೆಲೆಯಲ್ಲಿ, ಅನೇಕ ಸಾಮಾಜಿಕ ಕಾರ್ಯಕರ್ತರು ಈ ಪದ್ಧತಿಯನ್ನು ವಿರೋಧಿಸಿ ಹೋರಾಟ ಆರಂಭಿಸಿದರು ಎಂದು ಲೇಖಕರು ಉಲ್ಲೇಖಿಸಿದ್ದಾರೆ. ಈ ಹೋರಾಟದಲ್ಲಿ ಹಲವು ನಾಯಕರ ಅನುಭವಗಳನ್ನು ಲೇಖನಗಳಲ್ಲಿ ದಾಖಲಿಸಲಾಗಿದೆ. ಚಂದ್ರಗುತ್ತಿ ಪ್ರದೇಶದಲ್ಲಿ ಜನಜಾಗೃತಿ ಮೂಡಿಸುವ ಪ್ರಯತ್ನಗಳು ನಡೆದಿದ್ದರೂ, ಸ್ಥಳೀಯ ಭಕ್ತರಿಂದ ವಿರೋಧವೂ ವ್ಯಕ್ತವಾಯಿತು ಎಂಬುದನ್ನು ಕೃತಿಯಲ್ಲಿ ವಿವರಿಸಲಾಗಿದೆ.

ದೇವಿಪ್ರಸಾದ್ ಚಟ್ಟೋಪಾಧ್ಯಾಯ ಅವರ "ಮಾತೆಯರು ಮಾನ್ಯರಾದಾಗ" ಕೃತಿಯಲ್ಲಿ ಮಾನವ ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಮತ್ತು ಮಹತ್ವವನ್ನು ವಿಶ್ಲೇಷಿಸಲಾಗಿದೆ. ಪ್ರಾರಂಭಿಕ ಸಮಾಜದಲ್ಲಿ ಮಾತೃತ್ವಾಧಾರಿತ ವ್ಯವಸ್ಥೆಯು ಪ್ರಮುಖ ಸ್ಥಾನವನ್ನು ಹೊಂದಿತ್ತು ಎಂಬುದನ್ನು ಲೇಖಕರು ವಿವರಿಸಿದ್ದಾರೆ. ಮಹಿಳೆಯರು ಕೃಷಿಯ ಆವಿಷ್ಕಾರ ಮತ್ತು ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದರೆ, ಪುರುಷರು ಬೇಟೆ ಹಾಗೂ ಇತರ ಹೊರಾಂಗಣ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು ಎಂದು ಅವರು ಅಭಿಪ್ರಾಯಪಡುತ್ತಾರೆ. ನಂತರದ ಸಾಮಾಜಿಕ ಪರಿವರ್ತನೆಗಳೊಂದಿಗೆ ಪಿತೃಸತ್ತಾತ್ಮಕ ವ್ಯವಸ್ಥೆಯು ಬಲಗೊಂಡು, ಮಹಿಳೆಯರ

ಸಾಮಾಜಿಕ ಸ್ಥಾನಮಾನ ಕ್ರಮೇಣ ಕುಸಿಯತೊಡಗಿತು. ಮಕ್ಕಳ ಪಾಲನೆ, ಗೃಹಕೇಂದ್ರಿತ ಕೆಲಸಗಳು ಹಾಗೂ ಸಾಮಾಜಿಕ ನಿಯಮಗಳ ಮೂಲಕ ಮಹಿಳೆಯರನ್ನು ಮನೆಯೊಳಗೆ ಸೀಮಿತಗೊಳಿಸಲಾಯಿತು. ಇದರ ಪರಿಣಾಮವಾಗಿ ಸಂಪ್ರದಾಯಗಳು, ಧಾರ್ಮಿಕ ಆಚರಣೆಗಳು ಮತ್ತು ಪಿತೃಸತ್ತಾತ್ಮಕ ವ್ಯವಸ್ಥೆಗಳು ಮಹಿಳೆಯರನ್ನು ಅಧೀನ ಸ್ಥಿತಿಗೆ ತಳ್ಳಿದವು ಎಂಬುದನ್ನು ಈ ಕೃತಿಯಲ್ಲಿ ಸ್ಪಷ್ಟವಾಗಿ ವಿಶ್ಲೇಷಿಸಲಾಗಿದೆ.

ಊರ್ಮಿಳಾ ಪವಾರ್ ಮತ್ತು ಮೀನಾಕ್ಷಿ ಮೂನ್ ಅವರ ಮರಾಠಿ ಮೂಲ ಕೃತಿ 'ಆಮ್ಹೀ ಇತಿಹಾಸ್ ಘಡವಲಾ' (ಇಂಗ್ಲಿಷ್ ಅನುವಾದ ಮತ್ತು ಪ್ರಸ್ತಾವನೆ: ವಂದನಾ ಸೋನಾಲ್ಕರ್; ಕನ್ನಡ ಅನುವಾದ: ದು. ಸರಸ್ವತಿ –'ನಾವು ಇತಿಹಾಸ ಕಟ್ಟಿದೆವು') ಕೃತಿಯಲ್ಲಿ ಧಾರ್ಮಿಕ ವೇಶ್ಯಾವೃತ್ತಿಯ ವಿರುದ್ಧ ನಡೆದ ಸಂಘಟಿತ ಹೋರಾಟಗಳ ಇತಿಹಾಸವನ್ನು ದಾಖಲಿಸಲಾಗಿದೆ. 1908ರಲ್ಲಿಯೇ ಡಾ. ಬಿ. ಆರ್. ಅಂಬೇಡ್ಕರ್ ಅವರ ಚಿಂತನೆಗಳಿಂದ ಪ್ರೇರಿತರಾಗಿ ದೇವದಾಸಿ ಪದ್ಧತಿಯ ವಿರುದ್ಧ ಚಳವಳಿಗಳು ಆರಂಭಗೊಂಡವು ಎಂಬುದನ್ನು ಲೇಖಕರು ಉಲ್ಲೇಖಿಸಿದ್ದಾರೆ.

ಈ ಮೇಲಿನ ಸಾಹಿತ್ಯದ ಪರಿಶೀಲನೆಯಿಂದ ತಿಳಿದುಬರುವುದೇನೆಂದರೆ, ಹೆಚ್ಚಿನ ಅಧ್ಯಯನಗಳು ದೇವದಾಸಿ ಪದ್ಧತಿಯ ಇತಿಹಾಸ, ಧಾರ್ಮಿಕ ಹಿನ್ನೆಲೆ ಹಾಗೂ ಮಹಿಳೆಯರ ಮೇಲಿನ ಶೋಷಣೆಯ ವಿವಿಧ ಆಯಾಮಗಳ ಮೇಲೆ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಿವೆ. ಆದರೆ ದೇವದಾಸಿ ಸಮುದಾಯದ ಮಕ್ಕಳು ಮತ್ತು ಯುವಜನರ ಜೀವನಾನುಭವಗಳು, ಅವರ ದಿನನಿತ್ಯದ ಹೋರಾಟಗಳು ಮತ್ತು ಸಮಾಜದಲ್ಲಿ ತಮ್ಮ ಸ್ಥಾನವನ್ನು ನಿರ್ಮಿಸಿಕೊಳ್ಳುವ ಪ್ರಯತ್ನಗಳ ಕುರಿತು ಹೆಚ್ಚಿನ ಅಧ್ಯಯನಗಳು ನಡೆದಿಲ್ಲ. ವಿಶೇಷವಾಗಿ ದೇವದಾಸಿ ಹಿನ್ನೆಲೆಯಿಂದ ಬಂದ ಯುವಜನರು ಎದುರಿಸುವ ಗುರುತಿನ ಸಂಕಷ್ಟ, ಜಾತಿ ಆಧಾರಿತ ಕಳಂಕ, ಸಾಮಾಜಿಕ ತಿರಸ್ಕಾರ, ಆತ್ಮವಿಶ್ವಾಸದ ಕೊರತೆ ಹಾಗೂ ಮಾನಸಿಕ ಒತ್ತಡಗಳ ಕುರಿತು ಸಮಗ್ರ ಅಧ್ಯಯನಗಳ ಕೊರತೆ ಕಂಡುಬರುತ್ತದೆ.

ಅದೇ ರೀತಿ, ದೇವದಾಸಿ ಸಮುದಾಯದ ಯುವಜನರು ಶಿಕ್ಷಣ, ಉನ್ನತ ಶಿಕ್ಷಣ, ಉದ್ಯೋಗಾವಕಾಶಗಳು, ವಿವಾಹ, ನಾಯಕತ್ವದ ಅವಕಾಶಗಳು ಹಾಗೂ ಸಮಾಜದಲ್ಲಿ ಗೌರವಯುತ ಸ್ಥಾನವನ್ನು ಪಡೆಯುವ ಸಂದರ್ಭದಲ್ಲಿ ಎದುರಿಸುವ ಅಡೆತಡೆಗಳ ಬಗ್ಗೆ ಲಭ್ಯವಿರುವ ಸಾಹಿತ್ಯದಲ್ಲಿ ಆಳವಾದ ವಿಶ್ಲೇಷಣೆ ಕಾಣುವುದಿಲ್ಲ. ಸರ್ಕಾರದ ವಿವಿಧ ಯೋಜನೆಗಳು, ಪುನರ್ವಸತಿ ಕಾರ್ಯಕ್ರಮಗಳು ಮತ್ತು ಅಭಿವೃದ್ಧಿ ಕ್ರಮಗಳು ದೇವದಾಸಿ ಸಮುದಾಯದ ಯುವಜನರ ಜೀವನದಲ್ಲಿ ಎಷ್ಟು ಪರಿಣಾಮಕಾರಿಯಾಗಿವೆ ಎಂಬುದನ್ನು ಮೌಲ್ಯಮಾಪನ ಮಾಡುವ ಅಧ್ಯಯನಗಳೂ ಸೀಮಿತವಾಗಿವೆ. ವಿಶೇಷವಾಗಿ ಸಾಮಾಜಿಕ ಒಳಗೊಳ್ಳುವಿಕೆ ದೃಷ್ಟಿಕೋನದಿಂದ ದೇವದಾಸಿ ಸಮುದಾಯದ ಯುವಜನರು ಸಮಾಜದ ಮುಖ್ಯವಾಹಿನಿಗೆ ಸೇರಲು

ನಡೆಸುತ್ತಿರುವ ಪ್ರಯತ್ನಗಳು, ಅವರ ಹೋರಾಟಗಳು ಮತ್ತು ಸಬಲೀಕರಣದ ಪ್ರಕ್ರಿಯೆಗಳ ಕುರಿತು ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

ಒಟ್ಟಾರೆಯಾಗಿ, ಲಭ್ಯವಿರುವ ಸಾಹಿತ್ಯವು ದೇವದಾಸಿ ಪದ್ಧತಿಯ ಐತಿಹಾಸಿಕ, ಧಾರ್ಮಿಕ ಮತ್ತು ಸಾಮಾಜಿಕ ಆಯಾಮಗಳನ್ನು ವಿವರವಾಗಿ ವಿಶ್ಲೇಷಿಸಿದ್ದರೂ, ಅದರ ಪರಿಣಾಮವನ್ನು ದೇವದಾಸಿ ಸಮುದಾಯದ ಮಕ್ಕಳು ಮತ್ತು ವಿಶೇಷವಾಗಿ ಯುವಜನರ ಜೀವನದ ಮೇಲೆ ಅಧ್ಯಯನ ಮಾಡುವಲ್ಲಿ ಗಮನಾರ್ಹ ಕೊರತೆ ಇದೆ. ಇಂದಿನ ಸಂದರ್ಭದಲ್ಲಿ ಈ ಯುವಜನರು ತಮ್ಮ ಗುರುತು, ಆತ್ಮಗೌರವ, ಶಿಕ್ಷಣ, ಉದ್ಯೋಗ, ವಿವಾಹ, ಸಾಮಾಜಿಕ ಸ್ವೀಕಾರ ಮತ್ತು ಸಮಾನ ಅವಕಾಶಗಳಿಗಾಗಿ ನಿರಂತರ ಹೋರಾಟ ನಡೆಸುತ್ತಿದ್ದಾರೆ.

**ಸಂಶೋಧನೆಯ ಉದ್ದೇಶಗಳು**

- ದೇವದಾಸಿ ಕುಟುಂಬಗಳ ಯುವಜನರ ಸಾಮಾಜಿಕ ಒಳಗೊಳ್ಳುವಿಕೆಯ ಸ್ಥಿತಿಯನ್ನು ಅಧ್ಯಯನ ಮಾಡುವುದು.
- ಯುವಜನರ ಶೈಕ್ಷಣಿಕ ಸ್ಥಿತಿಯನ್ನು ವಿಶ್ಲೇಷಿಸುವುದು.
- ದೇವದಾಸಿ ಸಮುದಾಯದ ಯುವಜನರ ಶಿಕ್ಷಣ ಮುಂದುವರಿಕೆಗೆ ಅಡ್ಡಿಯಾಗುವ ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ಗುರುತಿಸುವುದು.
- ದೇವದಾಸಿ ಸಮುದಾಯದ ಯುವಜನರ ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ ಅವಕಾಶಗಳನ್ನು ಅಧ್ಯಯನ ಮಾಡುವುದು.
- ಸಾಮಾಜಿಕ ಕಳಂಕ ಮತ್ತು ಕುಟುಂಬದ ಹಿನ್ನೆಲೆಯು ದೇವದಾಸಿ ಸಮುದಾಯದ ಯುವಜನರ ಜೀವನದ ಮೇಲೆ ಬೀರುವ ಪರಿಣಾಮವನ್ನು ಅರ್ಥಮಾಡಿಕೊಳ್ಳುವುದು.
- ದೇವದಾಸಿ ಸಮುದಾಯದ ಯುವಜನರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಸಾಮಾಜಿಕ ಕಾರ್ಯದ ಮಧ್ಯಸ್ಥಿಕೆಗಳನ್ನು ಸೂಚಿಸುವುದು.

**ಸಂಶೋಧನಾ ವಿಧಾನ**

ಈ ಅಧ್ಯಯನವು ವಿವರಣಾತ್ಮಕ ಸಂಶೋಧನಾ ವಿನ್ಯಾಸವನ್ನು ಆಧರಿಸಿದೆ. ಅಧ್ಯಯನದ ವ್ಯಾಪ್ತಿಯಲ್ಲಿ ದೇವದಾಸಿ ಸಮುದಾಯಕ್ಕೆ ಸೇರಿದ ಯುವಜನರನ್ನು ಒಳಗೊಂಡಿದ್ದು, ಒಟ್ಟು 100 ಯುವಜನರಿಂದ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಾಥಮಿಕ ದತ್ತಾಂಶ ಸಂಗ್ರಹಣೆಗೆ ಕ್ರಮಬದ್ಧ ಪ್ರಶ್ನಾವಳಿಯನ್ನು ಬಳಸಲಾಗಿದೆ. ಒಂದೇ ರೀತಿಯ ಪ್ರಶ್ನೆಗಳ ಮೂಲಕ ಪ್ರತಿಕ್ರಿಯೆದಾರರಿಂದ

ಮಾಹಿತಿಯನ್ನು ಸಂಗ್ರಹಿಸುವುದರಿಂದ ದತ್ತಾಂಶವನ್ನು ಸಂಖ್ಯಾತ್ಮಕವಾಗಿ ವಿಶ್ಲೇಷಿಸಲು ಅನುಕೂಲವಾಗಿದೆ. ಅಧ್ಯಯನದಲ್ಲಿ ಪ್ರಶ್ನಾವಳಿ, ಕ್ಷೇತ್ರಭೇಟಿ, ಸಂದರ್ಶನ ಮತ್ತು ಸಮುದಾಯದ ಸದಸ್ಯರೊಂದಿಗೆ ಸಂವಾದಗಳಂತಹ ವಿಧಾನಗಳ ಮೂಲಕ ಯುವಜನರ ಜೀವನಾನುಭವಗಳನ್ನು ಅರ್ಥಮಾಡಿಕೊಳ್ಳಲಾಗಿದೆ. ದೇವದಾಸಿ ತಾಯಂದಿರು ಮತ್ತು ಅವರ ಮಕ್ಕಳೊಂದಿಗೆ ನಡೆಸಿದ ಕ್ಷೇತ್ರ ಭೇಟಿಗಳು ಕುಟುಂಬದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿವೆ.

**ಫಲಿತಗಳು**

ದೇವದಾಸಿ ಸಮುದಾಯದ ಯುವಜನರ ಕುಟುಂಬಗಳು ಈಗಲೂ ಚಿಕ್ಕ ಜಾಗದಲ್ಲಿ ಮನೆಗಳನ್ನು ಹೊಂದಿದ್ದು ಒಂದು ಅಡುಗೆಮನೆ ಒಂದು ಪಡಸಾಲೆಗಳನ್ನು ಹೊಂದಿದ್ದರು. ಉನ್ನತ ಶಿಕ್ಷಣದ ಕೊರತೆ ಸಮುದಾಯದ ಯುವಜನರಲ್ಲಿ ಎದ್ದು ಕಾಣುತ್ತಿರುವುದನ್ನು ಗಮನಿಸಬಹುದಾಗಿದೆ. ಶಾಲಾ ಕಾಲೇಜುಗಳು ಹಳ್ಳಿಗಳಿಂದ ದೂರ ಇರುವುದರಿಂದ ಗಂಡು ಮಕ್ಕಳು ಸ್ವಲ್ಪ ಜನ ಉನ್ನತ ಶಿಕ್ಷಣಕ್ಕೆ ಹೋಗುತ್ತಿದ್ದಾರೆ. ಯುವತಿಯರಿಗೆ ಉನ್ನತ ಶಿಕ್ಷಣಕ್ಕೆ ಹೊರಹೋಗುವ ಸವಾಲುಗಳು ಎದುರಾಗುತ್ತಿವೆ.

ಕೆಲವು ಅರ್ಜಿಗಳನ್ನು ಹಾಕುವ ಸಂದರ್ಭದಲ್ಲಿ ತಂದೆ ಹೆಸರು ಕಡ್ಡಾಯವೆಂಬುದನ್ನು ಯುವಜನರು ಅವಮಾನವಾಗಿ ನೋಡುತ್ತಿದ್ದಾರೆ. ಕಾರಣ ಅರ್ಜಿ ಹಾಕುವವರು ಈ ವಿಚಾರವಾಗಿ ಕುಹಕಗಳನ್ನು ಆಡಿರುವ ಅನುಭವಗಳನ್ನು ಹಂಚಿಕೊಂಡಿದ್ದಾರೆ. ದೇವದಾಸಿ ಸಮುದಾಯದ ಯುವಜನರು ಹೆಚ್ಚಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿರುವವರು. ಬಾಗಲಕೋಟೆ ಜಿಲ್ಲೆಯ ಅಧ್ಯಯನದಲ್ಲಿ ದೇವದಾಸಿ ಸಮುದಾಯದ ಯುವಜನರಲ್ಲಿ ಪರಿಶಿಷ್ಟ ಜಾತಿಗೆ ಸೇರಿದವರೇ ಹೆಚ್ಚಿನ ಸಂಖ್ಯೆಯಲ್ಲಿರುವುದು ಕಂಡುಬಂದಿದೆ. ತಂದೆಯ ಗುರುತು ಇಲ್ಲದಿರುವ ಕಾರಣದಿಂದಾಗಿ ಈ ಸಮುದಾಯದ ಯುವಜನರು ತಮ್ಮ ತಾಯಿಯ ಜಾತಿಯನ್ನೇ ತಮ್ಮ ಗುರುತಾಗಿ ಹೊಂದಿದ್ದಾರೆ.

ದೇವದಾಸಿ ಸಮುದಾಯದ ಕುಟುಂಬಗಳಲ್ಲಿ ಮಹಿಳೆಯರೇ ಕುಟುಂಬದ ಮುಖ್ಯಸ್ಥರಾಗಿರುವುದು ಅಧ್ಯಯನದಲ್ಲಿ ತಿಳಿದುಬಂದಿದೆ. ಅಧ್ಯಯನದ ಪ್ರಕಾರ, 74% ಯುವಜನರು ತಮ್ಮ ತಾಯಿಯನ್ನೇ ಕುಟುಂಬದ ಮುಖ್ಯಸ್ಥೆಯಾಗಿ ಗುರುತಿಸಿದ್ದಾರೆ. ಉಳಿದವರು ಈ ಹಿಂದೆ ತಾಯಿಯೇ ಇದ್ದರು ಈಗ ಬದಲಾಗಿರುವುದನ್ನು ತಿಳಿಸಿದರು. ದೇವದಾಸಿ ಸಮುದಾಯದ ಯುವಜನರ ಶಾಲೆ ಹಾಗೂ ಕಾಲೇಜುಗಳ ದಾಖಲಾತಿ ಪ್ರಮಾಣಪತ್ರಗಳಲ್ಲಿ ತಾಯಿಯ ಹೆಸರನ್ನೇ ದಾಖಲಿಸಿರುವುದು ಕಂಡುಬಂದಿದೆ. ಉಳಿದ 14% ಯುವಜನರು ತಮ್ಮ ತಾಯಿಯೊಂದಿಗೆ ಅಜ್ಜಿ, ಅಜ್ಜ ಅಥವಾ ತಾಯಿಯ ಸಹೋದರರ (ಅಣ್ಣ/ತಮ್ಮ) ಗುರುತನ್ನು ಹೊಂದಿರುವುದಾಗಿ ತಿಳಿಸಿದ್ದಾರೆ.

ಅಧ್ಯಯನದಲ್ಲಿ 73% ಯುವಜನರು ಮನೆಗಳ ಅಂಗಳದವರೆಗೆ ಪ್ರವೇಶವಿದೆ ಎಂದು ತಿಳಿಸಿದ್ದು, ಅಡುಗೆ ಮನೆ ಸೇರಿದಂತೆ ಮನೆಯ ಒಳಭಾಗಗಳಿಗೆ ಪ್ರವೇಶಕ್ಕೆ ಇನ್ನೂ ನಿರ್ಬಂಧಗಳಿರುವುದಾಗಿ ತಿಳಿಸಿದ್ದಾರೆ. ಇದರಿಂದ ಮೇಲ್ನೋಟಕ್ಕೆ ಜಾತಿ ತಾರತಮ್ಯ ಇಲ್ಲದಂತೆ ಕಂಡರೂ, ಮನೆಗಳ ಒಳಭಾಗದ ಪ್ರವೇಶದಲ್ಲಿ ಸಾಮಾಜಿಕ ತಾರತಮ್ಯವಿದೆ.

ದೇವದಾಸಿ ಸಮುದಾಯದ ಯುವಜನರಲ್ಲಿ 65% ಸೌದತ್ತಿ ರೇಣುಕಾ ಎಲ್ಲಮ್ಮ ಜಾತ್ರೆಗೆ ಹೋಗಲು ಇಷ್ಟಪಡುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಮುಖ್ಯ ಕಾರಣವಾಗಿ, ಜಾತ್ರೆಯಲ್ಲಿ ನಡೆಯುವ ಕೆಲವು ಆಚರಣೆಗಳು ಹಾಗೂ ಅದಕ್ಕಾಗಿ ಭರಿಸಬೇಕಾದ ಹೆಚ್ಚಿನ ಖರ್ಚು–ವೆಚ್ಚಗಳನ್ನು ಅವರು ಉಲ್ಲೇಖಿಸಿದ್ದಾರೆ. ಈ ಕಾರಣಗಳಿಂದಾಗಿ ಜಾತ್ರೆಯಲ್ಲಿ ಭಾಗವಹಿಸುವುದನ್ನು ತಪ್ಪಿಸುತ್ತಿರುವುದಾಗಿ ತಿಳಿಸಿದ್ದಾರೆ. ಉಳಿದ 35% ಯುವಜನರು ರೇಣುಕಾ ಎಲ್ಲಮ್ಮನ ಜಾತ್ರೆಯು ತಮ್ಮ ಕುಟುಂಬದ ಸಾಂಪ್ರದಾಯಿಕ ಆಚರಣೆಯ ಭಾಗವಾಗಿರುವುದರಿಂದ, ಅನಿವಾರ್ಯವಾಗಿ ಕುಟುಂಬದ ಸದಸ್ಯರೊಂದಿಗೆ ಜಾತ್ರೆಗೆ ಹೋಗಬೇಕಾದ ಪರಿಸ್ಥಿತಿ ಇದೆ ಎಂದು ತಿಳಿಸಿದ್ದಾರೆ. ಅಧ್ಯಯನದ ಸಂದರ್ಭದಲ್ಲಿ ರೇಣುಕಾ ಎಲ್ಲಮ್ಮನ ಜಾತ್ರೆಯಲ್ಲಿ ದೇವದಾಸಿ ಸಮುದಾಯದವರಷ್ಟೇ ಅಲ್ಲದೆ ಇತರ ಸಮುದಾಯದ ಜನರೂ ಸಹ ಭಾಗವಹಿಸುತ್ತಾರೆ ಎಂಬುದನ್ನು ಯುವಜನರು ಒಪ್ಪಿಕೊಂಡಿದ್ದಾರೆ.

ಉದ್ಯೋಗದ ದೃಷ್ಟಿಯಿಂದ ದೇವದಾಸಿ ಸಮುದಾಯದ ಯುವಜನರು ಅನೇಕ ಸವಾಲುಗಳನ್ನು ಎದುರಿಸುತ್ತಿರುವುದು ಅಧ್ಯಯನದಲ್ಲಿ ಕಂಡುಬಂದಿದೆ. ಅಧ್ಯಯನಕ್ಕೆ ಒಳಪಟ್ಟ 100 ಯುವಜನರಲ್ಲಿ 55 ಜನರು ದಿನಗೂಲಿ ಕೆಲಸಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. 23 ಯುವಜನರು ನಿರುದ್ಯೋಗಿಗಳಾಗಿದ್ದು, ಉದ್ಯೋಗದ ಹುಡುಕಾಟದಲ್ಲಿ ತೊಡಗಿಕೊಂಡಿದ್ದಾರೆ. ಉಳಿದ 22 ಯುವಜನರು ವ್ಯಾಪಾರ, ಶಿಕ್ಷಣ ಹಾಗೂ ಇತರ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಿದೆ. ಸ್ವಂತ ಕೃಷಿಭೂಮಿ ಇಲ್ಲದಿರುವ ಕಾರಣದಿಂದಾಗಿ ಬಹುತೇಕ ಯುವಜನರು ಕೃಷಿ ಆಧಾರಿತ ಸ್ವಯಂ ಉದ್ಯೋಗ ಅಥವಾ ಪಶುಸಂಗೋಪನೆ ಮುಂತಾದ ಚಟುವಟಿಕೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರಿಂದ ಅವರ ಜೀವನೋಪಾಯದ ಪ್ರಮುಖ ಮೂಲವಾಗಿ ದಿನಗೂಲಿ ಕೆಲಸಗಳೇ ಉಳಿದಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ.

**ಸಮಾರೋಪ**

ದೇವದಾಸಿ ಸಮುದಾಯದ ಯುವಜನರ ವರ್ತಮಾನ ಸ್ಥಿತಿಯನ್ನು ಗಮನಿಸಿದಾಗ, ಈ ಸಮುದಾಯದ ಯುವಜನರು ನೆಮ್ಮದಿಯ ಬದುಕನ್ನು ನಡೆಸಲು ಅಗತ್ಯವಿರುವ ಮೂಲಸೌಕರ್ಯಗಳ ಕೊರತೆಯಿಂದ ಬಳಲುತ್ತಿರುವುದು

ಸ್ಪಷ್ಟವಾಗಿ ಗೋಚರಿಸುತ್ತದೆ. ಇದರ ಪ್ರಮುಖ ಕಾರಣವೆಂದರೆ ದೇವದಾಸಿ ಸಮುದಾಯವು ಜಾತಿ, ಬಡತನ ಮತ್ತು ಲಿಂಗ ಭೇದಗಳನ್ನು ಒಳಗೊಂಡಿರುವ ಒಂದು ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಾಗಿ ರೂಪುಗೊಂಡಿರುವುದು. ಇದರಿಂದ ಯುವಜನರು ಈ ಪರಿಸ್ಥಿತಿಯಿಂದ ಹೊರಬರಲು ಹಲವು ಪ್ರಯತ್ನಗಳನ್ನು ಮಾಡಿದರೂ, ಸಮುದಾಯದೊಳಗಿನ ಸಂಬಂಧಗಳು, ಅವರನ್ನು ನೋಡುವ ದೃಷ್ಟಿಕೋನ ಮತ್ತು ಗುರುತಿಸುವ ವಿಧಾನಗಳು, ಅವರು ಗಟ್ಟಿ ನಿರ್ಧಾರಗಳನ್ನು ಕೈಗೊಳ್ಳುವ ಪ್ರಕ್ರಿಯೆಯನ್ನು ನಿಧಾನಗತಿಯಲ್ಲಿ ಮುಂದುವರಿಯುವಂತೆ ಮಾಡುತ್ತವೆ.

ವಿಶೇಷವಾಗಿ, ಶಿಕ್ಷಣಕ್ಕೆ ಅಗತ್ಯವಾದ ಸೌಲಭ್ಯಗಳು ಇತರರಂತೆ ಸುಲಭವಾಗಿ ಲಭ್ಯವಾಗದಿರುವುದರಿಂದ, ಮಕ್ಕಳ ಶಿಕ್ಷಣದ ಸಂಪೂರ್ಣ ಹೊಣೆಗಾರಿಕೆ ತಾಯಿಯ ಮೇಲೆಯೇ ಬೀಳುತ್ತದೆ. ಆದರೆ ಈ ತಾಯಂದಿರಿಗೆ ದೊರೆಯುವ ಮಾಸಾಶನ ಹಾಗೂ ಇತರ ದುಡಿಮೆಯಿಂದ ಬರುವ ಆದಾಯವು ಕುಟುಂಬದ ಮೂಲಭೂತ ಅವಶ್ಯಕತೆಗಳನ್ನೇ ಪೂರೈಸಲು ಸಾಕಾಗದ ಸ್ಥಿತಿ ಈ ಅಧ್ಯಯನದಲ್ಲಿ ಗೋಚರಿಸಿದೆ. ಇದರಿಂದ ಶಿಕ್ಷಣದಿಂದ ವಂಚಿತರಾಗಿರುವ ಯುವಜನರ ಬದುಕುಗಳು ಇಂದಿಗೂ ಅನೇಕ ಪ್ರಶ್ನೆಗಳನ್ನು ಎದುರಿಸುತ್ತಿವೆ.

ಕೆಲವು ಸಾಮಾಜಿಕ ಪದ್ಧತಿಗಳನ್ನು ಸಂಪೂರ್ಣವಾಗಿ ನಿಲ್ಲಿಸಿದಾಗ ಮಾತ್ರ ಅವುಗಳ ದುಷ್ಪರಿಣಾಮಗಳು ಮುಂದಿನ ಪೀಳಿಗೆಗಳಿಗೆ ತಲುಪುವುದನ್ನು ತಡೆಯಬಹುದು. ಉದಾಹರಣೆಗೆ, ಮುಟ್ಟಿನ ಕುರಿತು ಇರುವ ತಪ್ಪು ಕಲ್ಪನೆಗಳಿಂದ ಹೆಣ್ಣುಮಕ್ಕಳನ್ನು ಅಡಿಕೆ ಮನೆಗಳು, ದೇವಾಲಯಗಳು ಮತ್ತು ಮನೆಗಳೊಳಗೆ ಸಹ ಪ್ರವೇಶಿಸದಂತೆ ಮಾಡುವ ಪದ್ಧತಿ ಇಂದಿಗೂ ಕೆಲವು ಕಡೆಗಳಲ್ಲಿ ಮುಂದುವರಿದಿದೆ. ಈ ಪದ್ಧತಿಯನ್ನು ನಿಲ್ಲಿಸಲು ಸಮುದಾಯದೊಳಗೂ ಹಾಗೂ ಯುವತಿಯರಲ್ಲೂ ಮುಟ್ಟಿನ ಬಗ್ಗೆ ಇರುವ ಅಜ್ಞಾನ ಮತ್ತು ಅಂಧನಂಬಿಕೆಗಳನ್ನು ದೂರ ಮಾಡುವುದು ಅತ್ಯಾವಶ್ಯಕವಾಗಿದೆ. ಇದೇ ರೀತಿ, ಸತಿ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಲು ಸಮುದಾಯ ಮತ್ತು ಸರ್ಕಾರಗಳು ಒಟ್ಟಾಗಿ ಕೈಗೊಂಡ ಕ್ರಮಗಳು ಹಾಗೂ ಮಹಿಳೆಯರ ಹೋರಾಟಗಳು ಮಹತ್ವದ ಪಾತ್ರವಹಿಸಿವೆ ಎಂಬುದನ್ನು ಗಮನಿಸಬಹುದು.

**ಸಲಹೆಗಳು**

- ದೇವದಾಸಿ ಪದ್ಧತಿಯ ಕುಟುಂಬದಲ್ಲಿರುವ ದೇವದಾಸಿ ಮಕ್ಕಳಿಗೆ ಮತ್ತು ಯುವಜನರಿಗೆ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು ವಿದ್ಯಾರ್ಥಿವೇತನ ನಿಗದಿ ಮಾಡಬೇಕು.
- ಉನ್ನತ ವಿದ್ಯಾಭ್ಯಾಸ ಮಾಡುವವರಿಗೆ ಕಾಲೇಜುಗಳಲ್ಲಿ ಮೀಸಲಾತಿ ಅಡಿಯಲ್ಲಿ

ಅಧ್ಯಯನ ಮಾಡಲು ಅವಕಾಶ ಮಾಡಿಕೊಡಬೇಕು.

- ಮದುವೆ ಪ್ರೋತ್ಸಾಹಧನ ಮಹಿಳೆಯರಿಗೆ ಹೆಚ್ಚು ಇರುವುದರಿಂದ ಬೇಗ ಮದುವೆಯಾಗುವ ಸಾಧ್ಯತೆಗಳು ಇವೆ. ಇದರ ಜೊತೆಗೆ ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿದ್ಯಾರ್ಥಿವೇತನವನ್ನು ನೀಡಿದರೆ ದೇವದಾಸಿ ಪದ್ಧತಿ ಒಳಗೆ ಹೋಗುವ ಸಾಧ್ಯತೆಗಳು ಕಡಿಮೆಯಾಗುತ್ತವೆ.
- ಶಾಲಾ ಕಾಲೇಜುಗಳಲ್ಲಿ ದೇವದಾಸಿ ಸಮುದಾಯದ ಯುವಜನರಿಗೆ ವೃತ್ತಿ ಮಾರ್ಗದರ್ಶನ ನೀಡುವಂತೆ ಸೂಚನೆಯನ್ನು ಶಿಕ್ಷಣ ಇಲಾಖೆಗಳು ಒತ್ತು ನೀಡಬೇಕು. ಇದರಿಂದ ಅವರಿಗೆ ಉನ್ನತ ಹುದ್ದೆಗಳು ಮತ್ತು ಹೆಚ್ಚಿನ ಓದುಗಳಿಗೆ ತೆರೆದುಕೊಳ್ಳಲು ಸಹಾಯ ಹಸ್ತ ನೀಡಿದಂತಾಗುತ್ತದೆ.
- ಬಂದಂತಹ ಎಷ್ಟೋ ಯುವಜನರು ಉನ್ನತ ಶಿಕ್ಷಣಕ್ಕೂ ಹೋಗಲು ಸಾಧ್ಯವಾಗದೆ ಅವಕಾಶ ಕಳೆದುಕೊಂಡು ಕೂಲಿ ಮಾಡಿ ಬದುಕು ಕಟ್ಟಿಕೊಳ್ಳುತ್ತಿದ್ದಾರೆ.
- ದೇವದಾಸಿ ಪದ್ಧತಿ ಬಗ್ಗೆ ಅರಿವಿನ ಕಾರ್ಯಕ್ರಮ ಇನ್ನೂ ಹೆಚ್ಚಾಗಬೇಕು. ಇದರಿಂದ ಇಂದಿನ ಯುವಜನರಿಗೆ ಶಾಲಾ–ಕಾಲೇಜುಗಳಲ್ಲಿ ತಂದೆ ಯಾರು ಎಂಬ ಪ್ರಶ್ನೆಯು ಸೂಕ್ಷ್ಮ ವಿಚಾರ ಎಂದು ತಿಳಿಯುತ್ತದೆ.
- ಸಮುದಾಯಗಳಲ್ಲಿಯು ಅರಿವಿನ ಕಾರ್ಯಕ್ರಮಗಳು ಮುಂದುವರೆದರೆ ದೇವದಾಸಿ ಕುಟುಂಬದ ಯುವಜನರಿಗೆ ಗೌರವಯುತ ಬದುಕು ನಡೆಸಲು ಸಾಧ್ಯವಾಗುವುದು.
- ದೇವದಾಸಿ ತಾಯಂದಿರ ಗುರುತಿಸುವಿಕೆ ಹೆಚ್ಚಾಗಬೇಕು. ಇದರಿಂದ ಹಳ್ಳಿಗಳಿಂದ ನಗರ ಪ್ರದೇಶಗಳಿಗೆ ಹೋದ ಇವರಿಗೆ ಸರಕಾರಿ ಸೌಲಭ್ಯಗಳು ದೊರೆಯಲು ಸಹಾಯಕವಾಗುತ್ತದೆ.
- ದೇವದಾಸಿ ತಾಯಂದಿರು ತೀರಿಕೊಂಡ ಯುವಜನರ ಅಥವಾ ಮಕ್ಕಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ಅವರ ಶಿಕ್ಷಣ ಮತ್ತು ಉದ್ಯೋಗದ ಜವಾಬ್ದಾರಿಯನ್ನು ಸರಕಾರ ವಹಿಸಿಕೊಳ್ಳುವ ಅಗತ್ಯತೆ ಇದೆ. ಕಾರಣ ತಾಯಿಯ ಕುಟುಂಬ ಮಾತ್ರ ಇವರ ಜೊತೆ ಇರುವುದರಿಂದ ಅವರ ಆರೈಕೆಗಳಲ್ಲಿ ಗಮನ ಹರಿಸುವವರ ಸಂಖ್ಯೆ ಕಡಿಮೆ ಇರುತ್ತದೆ.
- ದೇವದಾಸಿ ಸಮುದಾಯದ ಮಕ್ಕಳ – ಯುವಜನರ ಕುರಿತು ಅಧ್ಯಯನಗಳು ಹೆಚ್ಚು ಆಗಬೇಕು.
- ದೇವದಾಸಿ ಪದ್ಧತಿಯಿಂದಾಗಿ ಮಾನಸಿಕವಾಗಿ ಕುಂದು ಹೋಗುತ್ತಿರುವ ಮಕ್ಕಳ

ಮತ್ತು ಯುವಜನರ ಮನೋಬಲ ಹೆಚ್ಚಿಸಲು ಸಮುದಾಯಗಳಲ್ಲಿ ಮಾನಸಿಕ ಸಮಾಲೋಚನೆಯ ಕಾರ್ಯಕ್ರಮಗಳು ಮತ್ತು ಸಮಾಲೋಚಕರ ವ್ಯವಸ್ಥೆಯನ್ನು ಮಾಡಬೇಕು.

- ದೇವದಾಸಿ ಸಮುದಾಯದ ಯುವಜನರು ಆರ್ಥಿಕವಾಗಿ ಸಬಲರಾಗಲು ಸರಕಾರಿ ಸೌಲಭ್ಯಗಳಾದ ತರಬೇತಿ ಮತ್ತು ಸಾಲ ಯೋಜನೆಗಳನ್ನು ನೀಡಿ ವ್ಯಾಪಾರಗಳಲ್ಲಿ ತೊಡಗುವಂತೆ ಮಾಡಬೇಕು.
- ಸರ್ಕಾರಿ ಶಾಲೆಗಳು ಹಿಂದುಳಿದ ಮತ್ತು ಅಂಚಿನ ಸಮುದಾಯಗಳಿಗೆ ಶಿಕ್ಷಣವನ್ನು ಲಭ್ಯವಾಗಿಸುವ ಪ್ರಮುಖ ಸಾಧನವಾಗಿದೆ ಆದರೆ, ಶಿಕ್ಷಣದ ಗುಣಮಟ್ಟ ಮತ್ತು ಸಂಪನ್ಮೂಲಗಳ ಕೊರತೆ ಅವರ ಸಮಗ್ರ ಅಭಿವೃದ್ಧಿಗೆ ಅಡ್ಡಿಯಾಗಬಹುದು. ಇದರಿಂದ ಸಮಾಜದಲ್ಲಿ ಅಸಮಾನತೆ ಮುಂದುವರಿಯುವ ಸಾಧ್ಯತೆ ಇದೆ. ಹಾಗಾಗಿ ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಹೆಚ್ಚಿಸುವುದು ಅಗತ್ಯ.

**ಪರಾಮರ್ಶನ ಗ್ರಂಥಗಳು:**

1. ಜಗದೀಶ ಕೊಪ್ಪ, ಎನ್., (2016), ಗಟ್ಟಿದನಿ ದಿಟ್ಟ ಕಲಾವಿದೆ ಬೆಂಗಳೂರು ನಾಗರತ್ನಮ್ಮ, ಬೆಂಗಳೂರು: ವಿಕಾಸ ಪ್ರಕಾಶನ.
2. ಶಿವಾನಂದ ಕುಗ್ವೆ, (2017), ಬೆತ್ತಲೆ ಸೇವೆ ವಿರೋಧಿಸಿದ ಆ ದಿನಗಳು, ಸಾಗರ: ದೀವರ ಪ್ರಕಾಶನ.
3. ದೇವಿ ಪ್ರಸಾದ್ ಚಟ್ಟೋಪಾಧ್ಯಾಯ, (2011), ಮಾತೆಯರು ಮಾನ್ಯರಾದಾಗ, ಬೆಂಗಳೂರು: ನವಕರ್ನಾಟಕ ಪ್ರಕಾಶನ.
4. ಚಿನ್ನಸ್ವಾಮಿ ಸೋಸಲೆ, ಎನ್., (2018), ದಲಿತರ ಬದುಕು: ಮೆಲಕು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
5. ಊರ್ಮಿಳಾ ಪವಾರ್ & ಮೀನಾಕ್ಷಿ ಮೂನ್, (2022), ನಾವು ಇತಿಹಾಸ ಕಟ್ಟಿದೆವು (ಅನು. ದು. ಸರಸ್ವತಿ), ಬೆಂಗಳೂರು: ಕವಿ ಪ್ರಕಾಶನ. (ಸೂಚನೆ: ಮೂಲದಲ್ಲಿ ಸ್ಥಳವಿರಲಿಲ್ಲ, ಸಾಮಾನ್ಯ ಪ್ರಕಾಶನದ ಆಧಾರದ ಮೇಲೆ ಬೆಂಗಳೂರು ಸೇರಿಸಲಾಗಿದೆ)
6. ಸಿದ್ದಸ್ವಾಮಿ, (2015), ಮೌಢ್ಯಾಸ್ತ್ರ, ಬೆಂಗಳೂರು: ಗೌತಮ ಪ್ರಕಾಶನ.
7. Nathan, Dev, & Xaxa, Virginius, (2012), Social Exclusion and Adverse Inclusion: Development and Deprivation of Adivasis in India, New Delhi: Oxford University Press.
8. Jogan Shankar, (1990), Devadasi Cult: A Sociological Analysis, New Delhi: Ashish Publishing House.
9. Jamanadas, K., (2007), Devadasis: Ancient to Modern, New Delhi: Kalpaz Publications.
10. Kersenboom, Saskia C., (1987), Nityasumangali: Devadasi Tradition in South India, Delhi: Motilal Banarsidass.
11. Dalrymple, William, (2009), Nine Lives: In Search of the Sacred in Modern India, London: Bloomsbury.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.